## ಇಲ್ಲಿಯವರೆಗೆ...

ವೇದ ಕಾಲದ ಆರ್ಯರು ಇನ್ನೂ ಇದ್ದಾರೆ ಎಂದು ಅವರನ್ನು ಹುಡುಕಿ ಕಾಶ್ಮೀರದ ಆರ್ಯ ಕಣಿವೆಯತ್ತ ನಿರೂಪಕನ ತಂಡ ಹೋಗುತ್ತದೆ. ಆಕಾಶದೆತ್ತರದ ಪರ್ವತಗಳ ನಡುವೆ ಕಿರಿದಾದ ಹಾದಿಯಲ್ಲಿ ಸಾಗಿ, ತಂಡದ ಸದಸ್ಯರು ಆರ್ಯರ 'ದಾಹ್' ಹಳ್ಳಿಯನ್ನು ತಲುಪುತ್ತಾರೆ. ಅಲ್ಲಿಂದ ಮುಂದೆ ಅವರಿಗೆ ಬೆಟ್ಟದಲ್ಲೊಂದು ಬೌದ್ಧ ವಿಹಾರ ಸಿಗುತ್ತದೆ. ಅಲ್ಲಿ ಸಿಕ್ಕ ಭಿಕ್ಕುವಿನಿಂದ ಆರ್ಯರ ಕುರಿತು ಬೇರೆ ಬೇರೆ ಕುತೂಹಲಕರ ವಿವರಗಳು ಸಿಗುತ್ತವೆ...

ಅದರಲ್ಲೂ ಮಾನವರ ಜಾತಿಗಳನ್ನು ಅಥವಾ ಪಂಗಡಗಳನ್ನು ಅಧ್ಯಯನ ಮಾಡುತ್ತಿದ್ದ ಮಾನವಶಾಸ್ತ್ರದ ವಿಜ್ಞಾನಿ. ಯೆಹೂದಿಗಳನ್ನು ಪ್ರಾಣಿಗಳಂತೆ ಪ್ರಯೋಗಾಲಯಕ್ಕೆ ಒಡ್ಡಿದ ಪಾಪಿ. ನಾನು ಇಲ್ಲಿ ನಿಮ್ಮ ಮುಂದೆ ಈ ವಿಹಾರದಲ್ಲಿರಲು ಕಾರಣಕರ್ತ" ಎಂದರು ಕಿಟಕಿಯ ಹೊರಗೆ ನೆಟ್ಟಿದ್ದ ತಮ್ಮ ದೃಷ್ಟಿಯನ್ನು ತೆಗೆಯದೆ. ಅವರ ಸ್ಥಿತಿಯನ್ನು ಗಮನಿಸಿ, ಉಮಾಶಂಕರ್ ಮತ್ತು ವೀಣಾಗೆ ಆತನ ಬಗ್ಗೆ ಏನನ್ನೂ ಕೇಳದಿರುವಂತೆ ಸಂಜ್ಞೆ ಮಾಡಿದೆ. ಆದರೆ ನನ್ನಲ್ಲಿದ್ದ ಒಂದು ಪ್ರಶ್ನೆ ಬಹುಶಃ ನನಗರಿವಿಲ್ಲದೆಯೆ ಹೊರಬಿದ್ದಿತ್ತು.

"ದಲೈ ಲಾಮಾ ಜೊತೆ ಈ ಚಿತ್ರ ತೆಗೆಸಿಕೊಳ್ಳಬೇಕಿದ್ದರೆ ಅವರಿಗೆ ಚಿರಪರಿಚಿತರೆ ಇರಬೇಕು" ಎಂದೆ. ತಕ್ಷಣ ಹೊರಗೆ ನೋಡುತ್ತಿದ್ದವರು ಆ ಚಿತ್ರದತ್ತ ತಿರುಗಿ, "ಹೌದು ಗುರುಗಳಿಗೆ ಪರಿಚಿತರೆ. ಕಾರಣ ಗುರುಗಳಿಗೆ ಎಲ್ಲರೂ ಒಳ್ಳೆಯವರಾಗಿಯೆ ಕಾಣುತ್ತಾರೆ. ಆರ್ಯರ ಅಧ್ಯಯನದಲ್ಲಿ ತೊಡಗಿದ್ದ ಈತ 86 ಮಂದಿ ಯೆಹೂದಿಗಳನ್ನು ಅನಿಲ ಕೋಣೆಗೆ ತಳ್ಳಿ ಉಸಿರುಗಟ್ಟಿಸಿ ಸಾಯಿಸುವ ಯೋಜನೆಯೊಂದರಲ್ಲಿ ಭಾಗಿಯಾಗಿದ್ದ. ಆ ಕಾರ್ಯದಲ್ಲಿ ಆತನ ಪಾತ್ರವೂ ಇದೆ



ದಲೈ ಲಾಮಾ ಜೊತೆ ಬ್ರುನೋ ಬೆಗೆರ್